# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 912 (1116) |
| ಸದಸ್ಯರ ಹೆಸರು : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ: | 23.02.2024 |
| ಉತ್ತರಿಸುವವರು : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

******

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪಂಚತಂತ್ರ 2.0 ಮೂಲಕ ಗ್ರಾಮ ಪಂಚಾಯಿತಿಗಳ ಸೇವೆಗಳ ಹಾಗೂ ಕಾರ್ಯನಿರ್ವಹಣೆಯಲ್ಲಿ ಸ್ಥಳೀಯವಾಗಿ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪಿಒಎಸ್ ಮೂಲಕ ತೆರಿಗೆ ಸಂಗ್ರಹ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪಿಒಎಸ್‌ನ ಕಾರ್ಯಾಚರಣೆಗೆ ಗ್ರಾಮೀಣ ಪ್ರದೇಶದಲ್ಲಿ ಅಸಮರ್ಪಕ ಅಂತರ್ಜಾಲ ಸಂಪರ್ಕದ ಸಹಿತ ಇತರ ಯಾವೆಲ್ಲ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆ; ಇವುಗಳನ್ನು ಪರಿಹರಿಸಲು ಕ್ರಮವಹಿಸಿದೆಯೇ; | ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಗ್ರಾಮ ಪಂಚಾಯತಿಗಳ ಪ್ರತಿನಿತ್ಯದ ಕಾರ್ಯಗಳನ್ನು ಮತ್ತು ಕಾರ್ಯಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಬೇಕಾದ ಯೋಜನೆಗಳ ಅನುಷ್ಠಾನ ಮತ್ತು ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಐಸಿಟಿ ಸಕ್ರಿಯಗೊಳಿಸುವವರನ್ನು ಕ್ರೋಢೀಕರಿಸಲು ಮತ್ತು ಪಂಚತಂತ್ರ1.0 ತಂತ್ರಾಂಶವನ್ನು ಉನ್ನತೀಕರಣಗೊಳಿಸಿ, ಪಂಚತಂತ್ರ 2.0 ತಂತ್ರಾಂಶದ ಮೂಲಕ ಗ್ರಾಮ ಪಂಚಾಯತಿಗಳನ್ನು ಆಧುನೀಕರಿಸಲು ಮತ್ತು ಡಿಜಿಟಲೀಕರಣಗೊಳಿಸಲು ಸಮಗ್ರ ವೇದಿಕೆಯನ್ನು ನಿರ್ಮಿಸಲು ಯೋಜಿಸಿದೆ ಹಾಗೂ ವಿವಿಧ ಯೋಜನೆಗಳಿಗೆ ಬಳಸಲಾಗುತ್ತಿರುವ ತಂತ್ರಾಂಶಗಳನ್ನು ಸಂಯೋಜನೆ ಮಾಡಲಾಗಿದೆ.<br>ಪಂಚತಂತ್ರ 2.0 ತಂತ್ರಾಂಶದ ಮೂಲಕ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಮತ್ತು ಗ್ರಾಮ ಪಂಚಾಯಿತಿಯ ಸ್ವಂತ ಸಂಪನ್ಮೂಲ ಸೇರಿದಂತೆ ವಿವಿಧ ನಿಧಿಗಳ ನಿರ್ವಹಣೆ, ಸೇವೆಗಳ ವಿಲೇವಾರಿ, ಗ್ರಾಮ ಸಭೆಗಳು, ವಾರ್ಡ್ ಸಭೆಗಳು ಮತ್ತು ಜನವಸತಿ ಸಭೆಗಳನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಸುವುದು ಸೇರಿದಂತೆ ಮುಂತಾದ ಆಡಳಿತಾತ್ಮಕ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ.<br>ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನ, ಗ್ರಾಮ ಪಂಚಾಯತಿಗಳಲ್ಲಿ ಪಡೆದುಕೊಳ್ಳಬಹುದಾದಂತಹ ವಿವಿಧ ಇಲಾಖೆಗಳ ಸೇವೆಗಳ ಬಗ್ಗೆ, ಗ್ರಾಮ ಸಭೆ, ವಾರ್ಡ್ ಸಭೆ ಮತ್ತು ಜನವಸತಿ ಸಭೆಗಳಲ್ಲಿ ತೆಗೆದುಕೊಳ್ಳುವ ನಿರ್ಣಯಗಳ ಬಗ್ಗೆ, ಯೋಜನೆಗಳಿಗೆ ಸಂಬಂಧಿತ ವೆಚ್ಚಗಳ ಬಗ್ಗೆ ಗ್ರಾಮೀಣ ಜನತೆಗೆ ಹಾಗೂ ದುರ್ಬಲ ವಿಭಾಗದವರಿಗೆ ಅರಿವು ಮತ್ತು ಮಾಹಿತಿಯನ್ನು ನೀಡುವ ನಿಟ್ಟಿನಲ್ಲಿ ಪಂಚತಂತ್ರ 2.0 ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದೆ.<br>ಪಂಚತಂತ್ರ 2.0 ತಂತ್ರಾಂಶದ ಅನುಷ್ಠಾನದ ಪ್ರಾರಂಭಿಕ ವೇಳೆ ಕೆಲವೊಂದು ತಾಂತ್ರಿಕ ಸಮಸ್ಯೆಗಳು ಉಂಟಾಗಿದ್ದು, ಅಂತಹ ಸಮಸ್ಯೆಗಳನ್ನು ಆಗಿಂದಾಗ್ಗೆ ಬಗೆಹರಿಸಲಾಗಿದೆ. |

| | | |
|---|---|---|
| | | ಇದೂವರೆಗೆ ಪಿಒಎಸ್ ಯಂತ್ರಗಳ ಮೂಲಕ ರೂ.413.68 ಕೋಟಿ ಆಸ್ತಿ ತೆರಿಗೆ ಸಂಗ್ರಹ ಮಾಡಲಾಗಿದೆ. ಪಿಒಎಸ್ ಯಂತ್ರಗಳು ಇಂಟರ್ನೆಟ್ ಇಲ್ಲದೇ ಕಾರ್ಯನಿರ್ವಹಿಸುವುದಿಲ್ಲ. ಇಂಟರ್ನೆಟ್ ಇಲ್ಲದೇ ಇರುವ ಪ್ರದೇಶಗಳಲ್ಲಿ ಮ್ಯಾನುವೆಲ್ ಆಗಿ ತೆರಿಗೆ ಸಂಗ್ರಹಣೆ ಮಾಡಿ, ಪಂಚತಂತ್ರ 2.0 ತಂತ್ರಾಂಶದ ಮೂಲಕ ಡಿಜಿಟಲ್ ರಶೀಧಿಯನ್ನು ನೀಡಬಹುದಾಗಿದೆ. |
| ಆ | ಗ್ರಾಮ ಪಂಚಾಯಿತಿಯ ಭೂಪರಿವರ್ತನೆಗೆ ತಂತ್ರಾಂಶದ ಮೂಲಕ ನೀಡುವ ಪ್ರಮಾಣ ಪತ್ರಗಳಲ್ಲಿ ಸರ್ವೆ ಸಂಖ್ಯೆ ಮುದ್ರಿತವಾಗದೆ ಗ್ರಾಮ ಪಂಚಾಯಿತಿ ಅನಗತ್ಯ ತಕರಾರುಗಳಿಗೆ ಕಾರಣವಾಗುತ್ತಿರುವುದನ್ನು ಪರಿಹರಿಸಲು ಸರ್ಕಾರದ ಕ್ರಮಗಳೇನು; | ಕಂದಾಯ ಇಲಾಖೆಯಿಂದ ನಿರ್ವಹಿಸುತ್ತಿರುವ ಭೂ ಪರಿವರ್ತನೆ ತಂತ್ರಾಂಶದಲ್ಲಿ ಭೂ ಪರಿವರ್ತನಾ ಆದೇಶಗಳನ್ನು ಸರ್ವೇ ನಂಬರ್ ಒಳಗೊಂಡಂತೆ ಆದೇಶಗಳನ್ನು ನೀಡಲಾಗುತ್ತಿದ್ದು, ಸರ್ವೇ ನಂಬರ್ ಗಳಿಲ್ಲದೇ ಯಾವುದೇ ಆದೇಶಗಳನ್ನು ಹೊರಡಿಸಿರುವುದಿಲ್ಲ. |
| ಇ | ಪೂರಕ ಕೃಷಿ ಚಟುವಟಿಕೆಗಳಾದ ಕೋಳಿ ಫಾರ್ಮ್‌ಗೆ ಭೂಪರಿವರ್ತನೆ ಅಗತ್ಯವಲ್ಲವೆಂದು ಕಂದಾಯ ಇಲಾಖೆ ಸುತ್ತೋಲೆ ಹೊರಡಿಸಿದ್ದು, ಪಂಚಾಯತ್ ಪರವಾನಿಗೆ ಅಗತ್ಯವಿಲ್ಲವೆಂದು ಸಕ್ಷಮ ಪ್ರಾಧಿಕಾರದ ನಿರ್ದೇಶನದಂತೆ ವಿದ್ಯುತ್ ಸಂಪರ್ಕಕ್ಕೆ ಪಂಚತಂತ್ರ 2.0 ರಲ್ಲಿ ಆಸ್ತಿ ಸಂಖ್ಯೆಯನ್ನು ನಮೂದಿಸದೇ ಪ್ರಮಾಣ ಪತ್ರ ನೀಡಲು ಅವಕಾಶ ನೀಡಲು ಕ್ರಮವಹಿಸಲಾಗಿದೆಯೇ; | ಕೃಷಿ ಭೂಮಿಯಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಸ್ವತ್ತಿನ ಸಂಖ್ಯೆಯನ್ನು ಸೃಜಿಸಿದ್ದಲ್ಲಿ ಮಾತ್ರ ವಿದ್ಯುತ್ ಸಂಪರ್ಕಕ್ಕೆ ಪಂಚತಂತ್ರ 2.0 ರಲ್ಲಿ ಪ್ರಮಾಣ ಪತ್ರ ನೀಡಲು ಅವಕಾಶವಿರುತ್ತದೆ. |

| | | |
|---|---|---|
| ಈ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೆಚ್ಚಿನ ಕಟ್ಟಡಗಳು ಕೃಷಿ ಭೂಮಿಯಲ್ಲಿರುವ ಕಾರಣ ಕಟ್ಟಡ ಸಂಖ್ಯೆಯಿರುವ ಆದರೆ ನಮೂನೆ 9/11 ಅಥವಾ 11 ಬಿ ಸೃಷ್ಟಿಯಾಗದಿರುವ ಕಟ್ಟಡ ತೆರಿಗೆ ಪಿಓಎಸ್ ಮೂಲಕ ತಕ್ಷಣಕ್ಕೆ ವಸೂಲಿ ಮಾಡಲು ಸಾಧ್ಯವಿರುವ ಬಗ್ಗೆ ಸರ್ಕಾರ ಪರಿಹಾರ ಕ್ರಮಗಳನ್ನು ರೂಪಿಸಿದೆಯೇ; (ವಿವರ ನೀಡುವುದು) | ಇ-ಸ್ವತ್ತು ತಂತ್ರಾಂಶದ ಮೂಲಕ ಸೃಷ್ಟಿಯಾಗದಿರುವ ಆಸ್ತಿಗಳಿಗೆ ಮತ್ತು ಪಂಚತಂತ್ರ 2.0 ತಂತ್ರಾಂಶದಲ್ಲಿತೆರಿಗೆ ವ್ಯಾಪ್ತಿಗೆ ಬಿಟ್ಟುಹೋದ ಆಸ್ತಿಗಳನ್ನು ಸೇರ್ಪಡೆ ಮಾಡಿಕೊಳ್ಳಲು ಇ-ಸ್ವತ್ತು ತಂತ್ರಾಂಶದಲ್ಲಿ ಅವಕಾಶ ನೀಡಲಾಗಿದೆ.<br>ಮ್ಯಾನುವೆಲ್ ಸಮೀಕ್ಷೆ ನಡೆಸಿದ ನಂತರ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಗ್ರಾಮವಾರು ತೆರಿಗೆ ವ್ಯಾಪ್ತಿಗೆ ಬಿಟ್ಟುಹೋದ ಆಸ್ತಿಗಳನ್ನು ಗುರುತಿಸಿ, ಇ-ಸ್ವತ್ತು ತಂತ್ರಾಂಶದಲ್ಲಿ ಸದರಿ ಆಸ್ತಿಗಳನ್ನು ಸೇರ್ಪಡೆ ಮಾಡಿಕೊಂಡು, ಪಿಓಎಸ್ ಯಂತ್ರಗಳ ಮೂಲಕ ತೆರಿಗೆ ವಸೂಲಾತಿ ಮಾಡಲು ಅವಕಾಶ ನೀಡಲಾಗಿದೆ. |
| ಉ | ಗ್ರಾಮ ಪಂಚಾಯತಿಗಳಲ್ಲಿ ಹಲವಾರು ಸೇವೆಗಳು ಇತರ ಇಲಾಖೆಗಳಾದ ಮೆಸ್ಕಾಂ, ಮಹಿಳಾ ಮತ್ತು ಮಕ್ಕಳ ಇಲಾಖೆ ಲೋಕೋಪಯೋಗಿ, ಅಂತರ್ಜಲ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ, ರಾಷ್ಟ್ರೀಯ ಹೆದ್ದಾರಿ ಶಿಕ್ಷಣ ಇತ್ಯಾದಿಗಳ ಕೆಲ ಇಲಾಖಾ ನಿಯಮಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ನಿಯಮಗಳಿಗೆ ವೈರುದ್ಯಗಳಿದ್ದು, ಇವುಗಳ ನಡುವೆ ಸಮನ್ವಯ ಸಾಧಿಸಲು ಸರ್ಕಾರದ ಕ್ರಮಗಳೇನು? | ಪರಿಶೀಲಿಸಲಾಗುವುದು |

ಸಂಖ್ಯೆ: ಗ್ರಾಅಪ/33/ಇ-ಆಡಳಿತ/2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು
ಪಂ.ರಾಜ್ ಹಾಗೂ ಮಾಹಿತಿ
ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ
ಸಚಿವರು.